**ದಿನಾಂಕಃ 15-11-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

2. ನಾನು ನಿಪಿ-1 ದೂರು ದಾಖಲಿಸಿದ ನಂತರ ಕೃತ್ಯ ನಡೆದ ಸ್ಥಳವಾದ ಅರಸೀಕೆರೆ ಟೌನಿನ ಮಾರುತಿ ನಗರದಲ್ಲಿರುವ ಮನೆಗೆ ಪೊಲೀಸರು ಬಂದು ಸ್ಥಳ ಮಹಜರನ್ನು ತಯಾರಿಸಿರುತ್ತಾರೆ. ನಾನು ಪೊಲೀಸರಿಗೆ ಕೃತ್ಯ ನಡೆದ ಸ್ಥಳವನ್ನು ತೋರಿಸಿ ನನ್ನ ಸಹಿ ಮಾಡಿರುತ್ತೇನೆ. ಸಾಕ್ಷಿದಾರರು ಗುರುತಿಸಿದ ಸ್ಥಳ ಮಹಜರನ್ನು ನಿಪಿ-2 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಫೋಟೋಗಳು ನಿಪಿ-2 ಮಹಜರ್ ಕಾಲದಲ್ಲಿ ಪೊಲೀಸರು ತೆಗೆದ ಫೋಟೋಗಳು ಆಗಿರುತ್ತವೆ. ಸಾಕ್ಷಿದಾರರು ಗುರುತಿಸಿದ 2 ಫೋಟೋಗಳನ್ನು ಕ್ರಮವಾಗಿ ನಿಪಿ-3 ಹಾಗೂ 4 ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ಫೋಟೋ ನನ್ನ ಗಂಡ 1ನೇ ಆರೋಪಿ ಜಯಪ್ರಸಾದ್ ನನ್ನ ಕುತ್ತಿಗೆ ಹಿಸುಕಿ ಕೊಲೆ ಮಾಡಲು ಪ್ರಯತ್ನಿಸಿದ ಸ್ಥಳದಲ್ಲಿ ಪೊಲೀಸರು ತೆಗೆದ ಫೋಟೋ ಆಗಿರುತ್ತದೆ. ಸಾಕ್ಷಿದಾರರು ಗುರುತಿಸಿದ ಫೋಟೋವನ್ನು ನಿಪಿ-5 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಇನ್ನೊಂದು ಮಹಜರಿನಲ್ಲಿರುವ ಸಹಿ ನನ್ನದು. ಈ ಮಹಜರನ್ನು ಪೊಲೀಸರು ಅರಸೀಕೆರೆ ಟೌನ್ ಮಾರುತಿ ನಗರದ ಆಫೀಸರ್ಸ್ ಕ್ಲಬ್ ಸಮೀಪ ಇರುವ ನನ್ನ ಅತ್ತೆಯ ಮನೆಯಲ್ಲಿ ಪೊಲೀಸರು ತಯಾರಿಸಿದ ಮಹಜರ್ ಆಗಿರುತ್ತದೆ. ಸಾಕ್ಷಿದಾರರು ಗುರುತಿಸಿದ ಮತ್ತೊಂದು ಮಹಜರನ್ನು ನಿಪಿ-6 ಎಂದು ಗುರುತಿಸಲಾಯಿತು. ನಿಪಿ-6 ಮಹಜರಿನಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ನಿಪಿ-6 ರಲ್ಲಿ

ಕಾಣಿಸಿರುವ ಮನೆಯಲ್ಲಿ ಆರೋಪಿಗಳು ನನಗೆ ಚಪ್ಪಲಿಯಿಂದ ಹೊಡೆದಿದ್ದರು. ನಿಪಿ-6 ಮಹಜರ್ ಕಾಲದಲ್ಲಿ ಪೊಲೀಸರು ತೆಗೆದ ಫೋಟೋ ಈಗ ನೋಡುತ್ತಿರುವ ಫೋಟೋ ಆಗಿರುತ್ತದೆ. ಸಾಕ್ಷಿದಾರರು ಗುರುತಿಸಿದ ಫೋಟೋವನ್ನು ನಿಪಿ-7 ಎಂದು ಗುರುತಿಸಲಾಯಿತು.

3. ನಾನು ಅರಸೀಕೆರೆ ನಗರ ಪೊಲೀಸ್ ಠಾಣೆಯಲ್ಲಿ ಹಾಜರಾಗಿ ನನ್ನ ವಿವಾಹಕ್ಕೆ ಸಂಬಂಧಿಸಿದ ನನ್ನ ಲಗ್ನಪತ್ರಿಕೆ ಹಾಗೂ ನನ್ನ ವಿವಾಹ ಕಾಲದಲ್ಲಿ ತೆಗೆಯಲಾದ 6 ಫೋಟೋಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಪೊಲೀಸರು ಮಹಜರ್ ತಯಾರಿಸಿ ಅಮಾನತ್ತುಪಡಿಸಿಕೊಂಡಿರುತ್ತಾರೆ. ಸಾಕ್ಷಿದಾರರು ಗುರುತಿಸಿದ ಅಮಾನತ್ತು ಮಹಜರನ್ನು ನಿಪಿ-8 ಎಂದು ಗುರುತಿಸಲಾಯಿತು. ನಿಪಿ-8 ರಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ಗುರುತಿಸಿದ ಅವರ ವಿವಾಹದ ಲಗ್ನಪತ್ರಿಕೆಯನ್ನು ನಿಪಿ-9 ಎಂದು ಹಾಗೂ ವಿವಾಹ ಕಾಲದಲ್ಲಿ ತೆಗೆಯಲಾದ 6 ಫೋಟೋಗಳನ್ನು ಕ್ರಮವಾಗಿ ನಿಪಿ-10 ರಿಂದ 15 ಎಂದು ಗುರುತಿಸಲಾಯಿತು. ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೊಲೀಸರಲ್ಲಿ ನನ್ನ ಹೇಳಿಕೆಯನ್ನೂ ಸಹ ನೀಡಿರುತ್ತೇನೆ.

**<u>ಪಾಟೀ ಸವಾಲುಃ 1ನೇ ಆರೋಪಿ ಪರ ಶ್ರೀ ಹೆಚ್ ಜಿ ವಕೀಲರಿಂದಃ</u>**

4. ನಾನು ಎಸ್ ಎಸ್ ಎಲ್ ಸಿ ಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಓದು, ಬರಹ ಬರುತ್ತದೆ. ನಿಪಿ-1 ದೂರನ್ನು ನಾನೇ ಬರೆದಿರುತ್ತೇನೆ. ನಾನು ನನ್ನ ದೂರಿನಲ್ಲಿ ಘಟನೆ ಡಿಸೆಂಬರ್ 28 ರಂದು ನಡೆದಿರುತ್ತದೆ ಎಂದು ತಿಳಿಸಿದ್ದು ನಾನು ತಿಂಗಳು, ವರ್ಷವನ್ನು ತಿಳಿಸಿಲ್ಲ ಎಂದರೆ ಸಾಕ್ಷಿದಾರರು ಘಟನೆ 28.11.2022 ರಲ್ಲಿ ನಡೆದಿರುತ್ತದೆ ಎಂದು ಉತ್ತರಿಸಿರುತ್ತಾರೆ. ಆರೋಪಿಗಳು ನನಗೆ ಬೆದರಿಕೆ ಹಾಕಿದ್ದ

ಕಾರಣದಿಂದ ಹಾಗೂ ನನಗೆ ಅನಾರೋಗ್ಯ ಇದ್ದ ಕಾರಣದಿಂದ ಘಟನೆ ನಡೆದ ದಿನವೇ ನಾನು ಪೊಲೀಸರಲ್ಲಿ ದೂರು ದಾಖಲ್ಮಾಡಲು ಆಗಲಿಲ್ಲ. ಘಟನೆ ನಡೆದಿರುತ್ತದೆ ಎನ್ನಲಾದ ಕಾಲದಲ್ಲಿ ನಾನು ವಾಸವಾಗಿದ್ದ ಮನೆಯಿಂದ ಪೊಲೀಸ್ ಠಾಣೆ ಸುಮಾರು ಅರ್ಧ ಕಿ ಮೀ ದೂರದಲ್ಲಿತ್ತು. ನನ್ನ ಬಳಿ ಮೊಬೈಲ್ ಫೋನ್ ಇತ್ತು ಎಂದರೆ ಸರಿ. ನಾನು ಪೊಲೀಸರಲ್ಲಿ ದೂರು ದಾಖಲಿಸಲು ಹೋದಾಗ 1ನೇ ಆರೋಪಿ ಜಯಪ್ರಸಾದ್ ರವರ 2ನೆಯ ಪತ್ನಿ ಕವಿತಾ ರವರಿಂದ ಹಣ ಪಡೆದಿದ್ದ ಪೊಲೀಸರು ನನ್ನ ದೂರನ್ನು ಪಡೆದುಕೊಳ್ಳಲಿಲ್ಲ. ಈ ಬಗ್ಗೆ ನಾನು ಪೊಲೀಸಿನ ಮೇಲಾಧಿಕಾರಿಗಳಿಗೆ ದೂರು ದಾಖಲಿಸಿರುತ್ತೇನೆ. ನನ್ನ ತಂದೆಯ ಮನೆ ರಾಮನಗರದಲ್ಲಿ ಇರುತ್ತದೆ. ಘಟನೆಯ ನಂತರ ನಾನು ನಮ್ಮ ತಂದೆಯ ಮನೆಯಾದ ರಾಮನಗರಕ್ಕೆ ಹೋಗಿ ಅಲ್ಲಿಂದ ವಾಪಸ್ ಬಂದು ಆನಂತರ ದೂರು ದಾಖಲು ಮಾಡಿರುತ್ತೇನೆ. ಅರಸೀಕೆರೆಯಿಂದ ರಾಮನಗರ ಸುಮಾರು 250 ಕಿ ಮೀ ದೂರದಲ್ಲಿದೆ. ಘಟನೆ ನಡೆದ ದಿನ ನಾನು ಮಧ್ಯಾಹ್ನ 12 ಗಂಟೆ ಸಮಯಕ್ಕೆ ಅರಸೀಕೆರೆಯಿಂದ ಹೊರಟು ನಮ್ಮ ತಂದೆಯ ಮನೆಗೆ ಹೋಗಿರುತ್ತೇನೆ. ಘಟನೆ ನಡೆದ ದಿನವೇ ನಾನು ಅರಸೀಕೆರೆ ಪೊಲೀಸ್ ಠಾಣೆಗೆ ಹೋಗಿ ದೂರು ದಾಖಲಿಸಲು ಪ್ರಯತ್ನಿಸಿದ್ದು ಪೊಲೀಸರು ನನ್ನ ದೂರು ಪಡೆದುಕೊಳ್ಳಲಿಲ್ಲ. ನಾನು ರಾಮನಗರದ ಮಹಿಳಾ ಸಂಘದಲ್ಲಿ ದೂರು ದಾಖಲಿಸಿದ ನಂತರ ಅರಸೀಕೆರೆ ಪೊಲೀಸರು ನನ್ನ ದೂರನ್ನು ಪಡೆದುಕೊಂಡಿರುತ್ತಾರೆ.

5. ರಾಮನಗರದ ಮಹಿಳಾ ಸಂಘದವರು 2-3 ಬಾರಿ ಅರಸೀಕೆರೆ ಪೊಲೀಸ್ ಠಾಣೆಗೆ ಬಂದಿರುತ್ತಾರೆ. ಘಟನೆ ನಡೆದ 3-4 ದಿನಗಳ ನಂತರ ನಾನು ರಾಮನಗರದ ಮಹಿಳಾ ಸಂಘದಲ್ಲಿ ದೂರು ದಾಖಲಿಸಿರುತ್ತೇನೆ. ನಿಪಿ-1ನ್ನು ನಾನೇ ನನ್ನ ಕೈಬರಹದಲ್ಲಿ ಬರೆದಿರುತ್ತೇನೆ. ಘಟನೆಗೆ ಸಂಬಂಧಿಸಿದಂತೆ ನಾನು ಆಸ್ಪತ್ರೆಯಲ್ಲಿ ಯಾವುದೇ ಚಿಕಿತ್ಸೆ

ಪಡೆದಿಲ್ಲ. 1ನೇ ಆರೋಪಿತನ ಜೊತೆ ವಿವಾಹವಾದ ನಂತರ ನಾನು ಹಾಗೂ 1ನೇ ಆರೋಪಿತ ಸುಮಾರು 7 ವರ್ಷಗಳ ಕಾಲ ಅನ್ಯೋನ್ಯವಾಗಿದ್ದೆವು. ನಾನು ನನ್ನ ಅತ್ತೆ ಮನೆಯಲ್ಲಿಯೇ ಗಂಡನ ಜೊತೆ ವಾಸವಾಗಿದ್ದೆ. ಮದುವೆ ಸಂದರ್ಭದಲ್ಲಿ ನನ್ನ ಗಂಡನಿಗೆ ಒಂದು ಲಕ್ಷದ ಐವತ್ತು ಸಾವಿರ ರೂ. ಹಣ, ನನಗೆ 20 ಗ್ರಾಂ ನ ನೆಕ್ಲೇಸ್, ಓಲೆ, ಮಾಟಿ, ಜುಮಕಿಗಳನ್ನು ನೀಡಲಾಗಿದೆ ಎನ್ನುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ನಿಪಿ-1 ದೂರಿನ ಪೂರ್ವದಲ್ಲಿ ನಾನು ಆರೋಪಿಗಳ ವಿರುದ್ಧ ಅವರು ನನಗೆ ಕಿರುಕುಳ ನೀಡುತ್ತಿದ್ದಾರೆ ಎನ್ನುವ ಬಗ್ಗೆ ಬೇರೆ ದೂರು ದಾಖಲ್ಮಾಡಿರಲಿಲ್ಲ.

6. ಸುಮಾರು 3 ವರ್ಷದಿಂದ ನಾನು ನಮ್ಮ ತಂದೆಯ ಮನೆಯಲ್ಲಿ ವಾಸ. ನನ್ನ ಹಿರಿಯ ಮಗಳು ಈಗಲೂ ಸಹ ನನ್ನ ಅತ್ತೆ ಮಾವ ರವರ ಜೊತೆ ವಾಸವಾಗಿರುತ್ತಾಳೆಂದರೆ ಸರಿ. ನನ್ನ ಗಂಡ 2ನೇ ವಿವಾಹ ಆಗಿರುತ್ತಾನೆ ಎನ್ನುವ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸಾಕ್ಷಿದಾರರು ಮುಂದುವರಿದ ಫೋಟೋ ಕೊಟ್ಟಿರುತ್ತೇನೆಂದು ಉತ್ತರಿಸಿರುತ್ತಾರೆ. ನನ್ನ ಗಂಡ 2ನೇ ಮದುವೆ ಆಗಿಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಗಂಡ ನಾನು ತಿಳಿಸಿರುವಂತೆ ನನ್ನನ್ನು ಕೊಲೆ ಮಾಡುವ ಯಾವುದೇ ಪ್ರಯತ್ನ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವಿವಾಹ ಕಾಲದಲ್ಲಿ ನನ್ನ ಗಂಡನಿಗೆ ವರದಕ್ಷಿಣೆಯಾಗಲೀ ಅಥವಾ ನನಗೆ ಯಾವುದೇ ಆಭರಣಗಳಾಗಲೀ ನನ್ನ ತವರು ಮನೆಯಿಂದ ನೀಡಲಾಗಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ನನಗೆ ಯಾವುದೇ ಹಿಂಸೆ ಅಥವಾ ತೊಂದರೆ ನೀಡದಿದ್ದರೂ ಸಹ ನಾನು ನನ್ನ ಗಂಡನ ವಿರುದ್ದ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆಂದರೆ ಸರಿಯಲ್ಲ.

7. ನನ್ನ ಗಂಡ ಮೊದಲು ಆರೋಗ್ಯ ಇಲಾಖೆಯಲ್ಲಿ ಬೆಂಗಳೂರು ನಗರದಲ್ಲಿ ಕೆಲಸದಲ್ಲಿದ್ದರು ಎಂದರೆ ಸರಿ. ನನ್ನ ಗಂಡ ನನ್ನನ್ನು ಹಾಗೂ ನನ್ನ ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ ಎಂದರೆ ಸರಿಯಲ್ಲ. ನಿಪಿ–2 ಮಹಜರನ್ನು ಪೊಲೀಸರು ಬರೆದ ದಿನಾಂಕ ನನಗೆ ನೆನಪಿಲ್ಲ. ನಿಪಿ–2 ಮಹಜರಿಗೆ ಮಿಲನ್ ಎಂಬುವವರು ಹಾಗೂ ಪಕ್ಕದ ಮನೆಯ ಮತ್ತೊಬ್ಬರು ಸಹಿ ಮಾಡಿರುತ್ತಾರೆ ನನಗೆ ಅವರ ಹೆಸರು ತಿಳಿದಿಲ್ಲ. ನಿಪಿ–2 ಮಹಜರಿನಲ್ಲಿ ಏನು ಬರೆದಿದೆ ಎಂಬುದನ್ನು ನಾನು ಓದಿ ನೋಡಿಲ್ಲ ಎಂದರೆ ಸರಿಯಲ್ಲ. ನಿಪಿ–2 ಮಹಜರಿನಲ್ಲಿ ಘಟನೆಯ ಸಂಬಂಧ ಬರೆಯಲಾಗಿದೆ. ನಿಪಿ–2 ಮಹಜರ್ ಕಾಲದಲ್ಲಿ ಪೊಲೀಸರು ಮನೆಯ ಮಾಲೀಕರಿಂದ ಯಾವುದೇ ದಾಖಲೆ ಪಡೆದುಕೊಂಡಿಲ್ಲ. ನಿಪಿ–2 ಮಹಜರಿಗೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ನಿಪಿ–2 ಮಹಜರಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–3 ಹಾಗೂ 4 ಫೋಟೋಗಳು ನಿಪಿ–2 ಮಹಜರಿನಲ್ಲಿ ಕಾಣಿಸಿರುವ ಮನೆಯ ಫೋಟೋಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–6 ಮಹಜರ್ ಕಾಲಕ್ಕೆ ಆರೋಪಿಗಳು ಮನೆಯಲ್ಲಿ ಇಲ್ಲದ ಕಾರಣದಿಂದ ಪೊಲೀಸರು ಆರೋಪಿಗಳ ಮನೆಯ ಹೊರಭಾಗದಲ್ಲಿ ನಿಪಿ–6 ಮಹಜರನ್ನು ತಯಾರಿಸಿರುತ್ತಾರೆ. ಆರೋಪಿಗಳು ಊರಿಗೆ ಹೋಗಿದ್ದು ಮಹಜರ್ ಕಾಲದಲ್ಲಿ ಆರೋಪಿಗಳ ಮನೆಗೆ ಬೀಗ ಹಾಕಲಾಗಿತ್ತು. ನಿಪಿ–6 ಮಹಜರನ್ನು ಪೊಲೀಸರು ಮಧ್ಯಾಹ್ನ 2 ರಿಂದ 3 ಗಂಟೆ ಸಮಯದಲ್ಲಿ ಬರೆದಿರುತ್ತಾರೆ. ನಿಪಿ–6 ಮಹಜರಿಗೆ ನನ್ನನ್ನು ಹೊರತುಪಡಿಸಿ ಬೇರೆ ಯಾರೂ ಸಹಿ ಮಾಡಿಲ್ಲ. ನಿಪಿ–7 ಮಹಜರ್ ಆರೋಪಿಗಳ ಸ್ವಂತ ಮನೆಯ ಫೋಟೋ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ನೀಡಿರುತ್ತೇನೆ ಎನ್ನಲಾದ ಹೇಳಿಕೆಯಲ್ಲಿ ಏನು ಬರೆದಿದೆ

ಎಂಬುದು ನನಗೆ ತಿಳಿದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಯಾವ ದಿನಾಂಕದಂದು ಪಡೆದುಕೊಂಡರು ಎಂದು ನನಗೆ ನೆನಪಿಲ್ಲ.

8. ನಾನು ತಿಳಿಸಿರುವಂತೆ ನನ್ನ ಗಂಡ ನನಗೆ ಯಾವುದೇ ಕಿರುಕುಳ ನೀಡಿಲ್ಲ ಹಾಗೂ ನನ್ನನ್ನು ಕೊಲೆ ಮಾಡುವ ಪ್ರಯತ್ನ ಮಾಡಿಲ್ಲ ಎಂದರೆ ಸರಿಯಲ್ಲ. ನಾನು 1ನೇ ಆರೋಪಿಯನ್ನು ವಿವಾಹವಾದ ನಂತರ ನನ್ನ ತವರು ಮನೆಯಲ್ಲಿಯೇ ಹೆಚ್ಚಾಗಿ ವಾಸವಾಗಿದ್ದು ಈ ಬಗ್ಗೆ 1ನೇ ಆರೋಪಿ ಆಕ್ಷೇಪಿಸಿದ ಕಾರಣದಿಂದ ಆತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1ನೇ ಆರೋಪಿ ಯಾವುದೇ ಕಾಲದಲ್ಲಿ ನನಗೆ ವರದಕ್ಷಿಣೆ ಪಡೆದು ಬರುವಂತೆ ಹೇಳಿ ಯಾವುದೇ ಕಿರುಕುಳ ನೀಡಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ರಿಂದ 5ನೇ ಆರೋಪಿತರ ಪರ ವಕೀಲರಿಂದಃ**

9. 3ನೇ ಆರೋಪಿ ಯಶೋದ ನನಗೆ ಹಳೆ ಸಂಬಂಧ. ನನ್ನ ಸ್ವಂತ ಊರು ಕೊಣನೂರು. ನನ್ನ ತಂದೆ ಬಾರ್ ಬೆಂಡಿಂಗ್ ಹಾಗೂ ಪ್ಲಂಬರ್ ಕೆಲಸ ಮಾಡುತ್ತಾರೆ. ನಮ್ಮ ತಂದೆಗೆ ಇಬ್ಬರು ಹೆಣ್ಣುಮಕ್ಕಳು ಹಾಗೂ ಓರ್ವ ಗಂಡು ಮಗ. ನಮ್ಮ ತಂದೆಗೆ ಒಂದು ಮನೆಯನ್ನು ಹೊರತುಪಡಿಸಿ ಬೇರೆ ಆಸ್ತಿ ಇರುವುದಿಲ್ಲ. ನಮ್ಮ ತಂದೆ ಬಡತನದಿಂದ ಜೀವನ ಮಾಡುತ್ತಿದ್ದಾರೆ ಎಂದರೆ ನಮ್ಮ ತಂದೆ ಮಧ್ಯಮ ವರ್ಗಕ್ಕೆ ಸೇರಿದವರು. ನಮ್ಮ ತಂದೆ ನನ್ನ ಮದುವೆಯನ್ನು ಮಾಡಲು ಆಗುವುದಿಲ್ಲ ಎನ್ನುವ ಕಾರಣಕ್ಕೆ 3ನೇ ಆರೋಪಿ ಯಶೋದ ನನ್ನನ್ನು ಅವರ ಮಗನಿಗೆ ವಿವಾಹ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

10. ನನ್ನ ವಿವಾಹ ಕಾಲದಲ್ಲಿ ನನ್ನ ತಂದೆಗೆ ವರದಕ್ಷಿಣೆಯಾಗಿ ಒಂದು ಲಕ್ಷದ ಐವತ್ತು ಸಾವಿರ ರೂ. ಹಣವನ್ನು ನೀಡುವ ಚೈತನ್ಯ ಇರಲಿಲ್ಲ ಎಂದರೆ ಸರಿಯಲ್ಲ. ಈ

ಪ್ರಕರಣದಲ್ಲಿ ಸುಳ್ಳು ದೂರು ದಾಖಲು ಮಾಡುವ ಉದ್ದೇಶದಿಂದ ನಮ್ಮ ತಂದೆ ವರದಕ್ಷಿಣೆಯನ್ನು ನೀಡಿರುತ್ತಾರೆಂದು ಸುಳ್ಳು ಸಂಗತಿಯನ್ನು ಕಾಣಿಸಿರುತ್ತೇನೆಂದರೆ ಸರಿಯಲ್ಲ. ವಿವಾಹದ 7 ವರ್ಷದ ನಂತರ ನನ್ನ ಹಾಗೂ ನನ್ನ ಅತ್ತೆ ಮಾವ ರವರ ನಡುವೆ ಹೊಂದಾಣಿಕೆ ಬಾರದ ಕಾರಣದಿಂದ ನನ್ನ ಅತ್ತೆ ಮಾವ ನನ್ನ ಹಾಗೂ ನನ್ನ ಗಂಡನಿಗೆ ಪ್ರತ್ಯೇಕ ಬೇರೆ ಮನೆ ಮಾಡಿ ಕಳುಹಿಸಿರುತ್ತಾರೆಂದರೆ ಸರಿಯಲ್ಲ. ಬೇರೆ ಮನೆಯ ಬಾಡಿಗೆಯನ್ನು ನನ್ನ ಮಾವರವರೇ ಪಾವತಿಸುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಅತ್ತೆ ಮಾವರವರೇ ನನ್ನ 2ನೇ ಮಗಳಿಗೂ ವಿದ್ಯಾಭ್ಯಾಸ ಕೊಡಿಸುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ಮೊದಲನೆಯ ಮಗಳು ನನ್ನ ಅತ್ತೆ ಮಾವ ರವರ ಬಳಿ ಇರುತ್ತದೆ ಎಂದರೆ ಸರಿ. ನನ್ನ ಅತ್ತೆ ಮಾವರವರೆ ನನ್ನ ಮೊದಲನೆಯ ಮಗಳ ಪಾಲನೆ ಪೋಷಣೆ ಮಾಡುತ್ತಿದ್ದಾರೆಂದರೆ ಸರಿ.

11. ನನ್ನ ಮೈದುನ ನನ್ನ ಗಂಡ 2ನೇ ವಿವಾಹ ಆಗಿರುವ ಬಗ್ಗೆ ನನಗೆ ಫೋನ್ ಮಾಡಿ ವಿಡೀಯೋ ಕಳುಹಿಸಿರುತ್ತಾರೆ. ನಾನು ನನ್ನ ದೂರು ದಾಖಲಿಸುವ ಕಾಲಕ್ಕೆ ನನ್ನ ಮೈದುನ ಕಳುಹಿಸಿದ ವೀಡಿಯೋವನ್ನು ಪೊಲೀಸರಿಗೆ ನೀಡಿಲ್ಲ. ನನ್ನ ಮೈದುನ ನನಗೆ ಯಾವುದೇ ವೀಡಿಯೋ ಕಳುಹಿಸದ ಕಾರಣದಿಂದ ನಾನು ಅದನ್ನು ಪೊಲೀಸರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಿಃ28 ರಂದು ನಾನು ನನ್ನ ಅತ್ತೆ ಮಾವ ರವರ ಮನೆಯ ಬಳಿ ಹೋಗಿ ಅವರ ಮಗ 2ನೇ ವಿವಾಹ ಆಗಿರುವ ಬಗ್ಗೆ ಕೇಳಿರುತ್ತೇನೆ. ಮೇಲೆ ಕಾಣಿಸಿದ ದಿನಾಂಕದಂದು ನನ್ನ ಅತ್ತೆ ಮಾವ ಅವರ ಮನೆಯಲ್ಲಿ ಇರದೆ ಊರಿಗೆ ಹೋಗಿದ್ದು ನಾನು ಆ ದಿನ ನನ್ನ ಅತ್ತೆ ಮಾವ ರವರ ಮನೆಗೆ ಹೋಗಿದ್ದೆ ಎಂದು ಸೃಷ್ಟಿಸಿದ ಸಂಗತಿಯನ್ನು ತಿಳಿಸಿರುತ್ತೇನೆಂದರೆ ಸರಿಯಲ್ಲ.

12. 4ನೇ ಆರೋಪಿ ಶಶಿಧರ್ ಹಾಗೂ 5ನೇ ಆರೋಪಿ ಧರಣೇಶ್

ವಿವಾಹವಾಗಿ ಪ್ರತ್ಯೇಕ ಜೀವನ ನಡೆಸುತ್ತಿದ್ದಾರೆಂದರೆ ಸರಿ. 4 ಹಾಗೂ 5ನೇ ಆರೋಪಿಗಳನ್ನು ದುರುದ್ದೇಶದಿಂದ ಈ ಪ್ರಕರಣದಲ್ಲಿ ಆರೋಪಿಗಳನ್ನಾಗಿ ಮಾಡಿರುತ್ತೇನೆಂದರೆ ಸರಿಯಲ್ಲ. ನಾನು ತಿಳಿಸಿರುವಂತೆ ನನ್ನ ಅತ್ತೆ ಮಾವ ರವರ ಮನೆಯ ಬಳಿ ಹೋಗಿಲ್ಲ ಎಂದರೆ ಸರಿಯಲ್ಲ. ನನ್ನ ಅತ್ತೆ ಮಾವ ರವರ ಮನೆಯ ಬಳಿ ಆರೋಪಿಗಳು ನನ್ನ ಜೊತೆ ಯಾವುದೇ ಜಗಳ ಆಡಿಲ್ಲ ಹಾಗೂ ನನಗೆ ಯಾವುದೇ ಚಪ್ಪಲಿಯಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ನನ್ನ ಗಂಡ ವಾಸವಾಗಿದ್ದ ಮನೆಯ ಬಾಡಿಗೆಯನ್ನು ಮೊದಲು ನನ್ನ ಅತ್ತೆ ಮನೆಯವರೇ ನೀಡುತ್ತಿದ್ದರು. ನನ್ನ ಗಂಡ ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ಗಂಡ ಹಾಗೂ ಅವರ ತಂದೆ ತಾಯಿಗಳ ನಡುವೆ ಮಾತುಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ದಿನಾ ಮಧ್ಯಪಾನ ಮಾಡಿ ಅವರ ತಂದೆ ತಾಯಿಯ ಜೊತೆ ಜಗಳ ಆಡುತ್ತಿರುವ ಕಾರಣದಿಂದ ನನ್ನ ಅತ್ತೆ ಮಾವ ನನ್ನ ಗಂಡನನ್ನು ಅವರ ಮನೆಯಿಂದ ಹೊರ ಹಾಕಿರುತ್ತಾರೆಂದರೆ ಸರಿಯಲ್ಲ. ನಿಪಿ–7 ಫೋಟೋ ತೆಗೆದ ಸ್ಥಳಕ್ಕೆ ಯಾವ ದಿನಾಂಕದಂದು ಹೋಗಲಾಗಿತ್ತು ಎಂದು ನನಗೆ ತಿಳಿದಿಲ್ಲ. ಕೇಸಿಗಾಗಿ ನಿಪಿ–7 ಫೋಟೋವನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

13. 1ನೇ ಆರೋಪಿತ ನನಗೆ ನೀಡಿರುತ್ತಾನೆ ಎನ್ನಲಾದ ಹಿಂಸೆಗೂ, ಆರೋಪಿ–2 ರಿಂದ 5 ರವರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ನನ್ನ ಗಂಡ ಸೇರಿ ಪ್ರತ್ಯೇಕವಾಗಿ ವಾಸವಾಗಿ ಜೀವನ ನಡೆಸುತ್ತಿದ್ದ ಕಾರಣದಿಂದ ನನ್ನ ಹಾಗೂ ನನ್ನ ಗಂಡನ ಸಾಂಸಾರಿಕ ವಿಷಯಗಳ ಬಗ್ಗೆ 2 ರಿಂದ 5ನೇ ಆರೋಪಿಗಳಿಗೆ ಯಾವುದೇ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಪ್ರಶ್ನಿತ 2ನೇ ವಿವಾಹಕ್ಕೂ, 2 ರಿಂದ 5ನೇ ಆರೋಪಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ

ಎಂದರೆ ಸರಿಯಲ್ಲ. 2 ರಿಂದ 5ನೇ ಆರೋಪಿಗಳು ನನಗೆ ವರದಕ್ಷಿಣೆ ಬಾಬ್ತು ಯಾವುದೇ ಕಿರುಕುಳ ನೀಡದಿದ್ದರೂ ಹಾಗೂ ನನ್ನ ಮೇಲೆ ಯಾವುದೇ ಹಲ್ಲೆ ನಡೆಸದಿದ್ದರೂ ಸಹ 2 ರಿಂದ 5ನೇ ಆರೋಪಿಗಳ ವಿರುದ್ಧ ನಾನು ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.